

ಪಂಚಾಯಿತಿ ಚುನಾವಣೆ ವಿಜೇತರ ಸಂಭ್ರಮ. ಈ ಉತ್ಸಾಹ ಕೆಲಸದಲ್ಲೂ ಸಾಧ್ಯವಾದಾಗ ಹಳ್ಳಿಗಳು ನಂದನವಾದಾವು

# ಪಂಚಾಯತ್ ರಾಜ್ ಸಂಭ್ರಮ

ಭಾರತದ ಅಂತಃಸತ್ವ ಇರುವುದೇ ಹಳ್ಳಿಗಳಲ್ಲಿ ಎಂದು ಗಾಂಧೀಜಿ ನಂಬಿದ್ದರು. ಯಾವುದೇ ಆರ್ಥಿಕತೆಯ ಚಕ್ರದಲ್ಲಿ ಹಳ್ಳಿಗಳ ಸ್ಥಾನ ಕೇಂದ್ರದಲ್ಲಿರಬೇಕೆಂದು ಬಯಸಿ, ಆ ನಿಟ್ಟಿನಲ್ಲಿ ಸಾಕಷ್ಟು ಕೆಲಸ ಮಾಡಿದ್ದರು. ನೈರ್ಮಲ್ಯ ಬದುಕಿನ ರೀತಿ ಎಂದು ಪ್ರತಿಪಾದಿಸಿದ್ದರು. ಪ್ರಜಾಪ್ರಭುತ್ವ ಯಶಸ್ವಿಯಾಗುವುದು ಹಳ್ಳಿಗಳ ಬದುಕು ಹಸನಾದಾಗ ಎಂದು ಅಂಬೇಡ್ಕರ್ ಗುರುತಿಸಿದ್ದರು. ದೇಶದ ಮೊದಲ ಘಟಕವಾದ ಹಳ್ಳಿಗೆ ಅಧಿಕಾರ ನೀಡುವ ಸಾಂವಿಧಾನಿಕ ಸವಲತ್ತು ನೀಡಿದ ಮೊದಲ ಪ್ರಜಾಪ್ರಭುತ್ವದ ನಾಡು ನಮ್ಮದು. ಜನರಿಂದ, ಜನರಿಗಾಗಿ ಮತ್ತು ಜನರಿಗೋಸ್ಕರ ಎಂಬ ಧ್ಯೇಯದ ನೆಲೆಯಲ್ಲಿ ರಚಿತವಾದ ಸಂವಿಧಾನ ಹಳ್ಳಿಗರ ಕೈಗೇ ರಾಜಕೀಯ ಅಧಿಕಾರ ನೀಡಿದೆ. 'ಪಂಚಾಯತ್ ರಾಜ್ ವ್ಯವಸ್ಥೆ' ಎಂಬ ಕ್ರಾಂತಿಕಾರಿ ಪರಿಕಲ್ಪನೆಗೆ ಜೀವ ನೀಡಿ ಜನರಿಗೇ ಅಧಿಕಾರ ನೀಡಿ ಹಲವು ಅಭಿವೃದ್ಧಿಗಳನ್ನೂ ಈ ನೆಲ ಕಂಡಿದೆ.

ಭಾರತ ತನ್ನ ಹಳ್ಳಿಗಳಲ್ಲಿ ಜೀವಿಸುತ್ತದೆ ಎಂಬ ಮಾತಿದೆ. ದೇಶಕ್ಕೆ ಅನ್ನ ನೀಡುವ ರೈತ ಇರುವುದು ಹಳ್ಳಿಯಲ್ಲಿ. ಭೂಮಿಯ ಸಹನೆ ರೈತನಿಗೂ ಇದೆ. ಹಳ್ಳಿಗರ ನೆರವಿಗೆ ನಿಲ್ಲಲು ವಿಲೇಜ್ ಡೆವಲಪ್‌ಮೆಂಟ್ ಕೌನ್ಸಿಲ್‌ಗಳಿವೆ. ಸುತ್ತಲಿನ ಅರಣ್ಯ ಕಾಪಾಡಲು ಗ್ರಾಮ ಅರಣ್ಯ ಸಮಿತಿಗಳೂ ಇವೆ. ಪ್ರತಿ ಪಂಚಾಯ್ತಿಗೂ ತನ್ನ ಹಳ್ಳಿಯ ವ್ಯಾಪ್ತಿಯ ಸಂಪನ್ಮೂಲಗಳ ಮೇಲೆ ಸುಸ್ಥಿರ ಬಳಕೆಯ ಸಂಪೂರ್ಣ ಹಕ್ಕಿನ ಜೊತೆ ಅದನ್ನು ಸಂರಕ್ಷಿಸಿಕೊಂಡು ಹೋಗುವ ಜವಾಬ್ದಾರಿಯೂ ಇದೆ. ಊರಿನ ಕೆರೆ, ಕೊಳ, ಝರಿ, ದೇವಾಲಯ, ಜಲಪಾತ, ಬೃಹತ್ ಮರ, ಗಿಡಮೂಲಿಕೆ ವನ, ಪ್ರೇಕ್ಷಣಾಸ್ಥಳ, ಪಕ್ಷಿಧಾಮ, ಚಾರಣ ಮಾರ್ಗ, ಪವಿತ್ರ ವನ, ನೈಸರ್ಗಿಕ ಶಿಲಾ ರಚನೆ, ವನ್ಯ ಜೀವಿ ಸಂಪತ್ತಿನ ಮೇಲೆ ಹಕ್ಕನ್ನು ಹೊಂದಿರುವ ಪಂಚಾಯ್ತಿಗಳು ಅವಕ್ಕೆ ಧಕ್ಕೆ ಬರದಂತೆ ಕೈಗೊಳ್ಳುವ ಅಭಿವೃದ್ಧಿ ಯೋಜನೆಗಳಿಗೆ ಒಪ್ಪಿಗೆ ನೀಡುವ ಎಲ್ಲ ಅಧಿಕಾರ ಹೊಂದಿವೆ. ಚೆನ್ನಾಗಿ ಕೆಲಸ ಮಾಡುವ ಗ್ರಾಮ ಪಂಚಾಯ್ತಿಗಳಿಗೆ ರಾಷ್ಟ್ರೀಯ ಪುರಸ್ಕಾರ ಹಾಗೂ ಹೆಚ್ಚಿನ ಅನುದಾನವೂ ದೊರೆಯುತ್ತಿದೆ.

ಸಂಪೂರ್ಣ ನೈರ್ಮಲ್ಯ ಸಾಧಿಸುವ ಗ್ರಾಮಕ್ಕೆ 'ನಿರ್ಮಲ್ ಗ್ರಾಮ ಪುರಸ್ಕಾರ' ನೀಡಲಾಗುತ್ತಿದೆ. ಹಾಗೆಯೇ ದೀನ್‌ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರ, ನಾನಾಜಿ ದೇಶ್ ಮುಖ್ ರಾಷ್ಟ್ರೀಯ ಗೌರವ್ ಗ್ರಾಮ್ ಸಭಾ ಪುರಸ್ಕಾರ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ ಪುರಸ್ಕಾರ, ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಪ್ರಶಸ್ತಿ, ಇ–ಪಂಚಾಯ್ತಿ ಪುರಸ್ಕಾರಗಳನ್ನು ನೀಡಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯ್ತಿಗಳನ್ನು ಗೌರವಿಸಲಾಗುತ್ತಿದೆ. 'ಗ್ರಾಮ ಭಾರತ ಸಧೃಡವಾದರೆ, ಭಾರತ ಸಶಕ್ತವಾಗುತ್ತದೆ' ಎಂಬ ಧ್ಯೇಯದಿಂದ ದೇಶಾದ್ಯಂತ ಪಂಚಾಯ್ತಿ ಮತ್ತು ಗ್ರಾಮಸಭೆಗಳನ್ನು ಬಲಪಡಿಸಲಾಗುತ್ತಿದೆ. ಜನ, ಜಮೀನು, ಜಾನುವಾರು, ಹಸಿರನ್ನೊಳಗೊಂಡು ನೀರು ನಿರ್ವಹಣೆ, ವ್ಯವಸಾಯ, ಜಾನುವಾರು ಸಾಕಣೆ, ಮೀನು ಕೃಷಿ, ಶಕ್ತಿ ಉತ್ಪಾದನೆ ಮತ್ತು ಬಳಕೆಗಳ ಸಂಕೀರ್ಣ ಜೀವಿವ್ಯವಸ್ಥೆಯನ್ನು ಪ್ರತಿನಿಧಿಸುವ ನಮ್ಮ ಹಳ್ಳಿಗಳು ವಾಯುಗುಣ ನಿಯಂತ್ರಣಕ್ಕೆ ಒದಗುವ ಸಮರ್ಥ ಘಟಕಗಳೆಂದೇ ಹೇಳಬಹುದು. ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಯಶಸ್ವಿಯಾದ ಅನೇಕ ಗ್ರಾಮ ಪಂಚಾಯತಿಗಳು ನಮ್ಮಲ್ಲಿವೆ. ಅಂಥ ಕೆಲವು



ಆಂಧ್ರಪ್ರದೇಶದ ನೆಮ್ಮಲಪಡು ಪಂಚಾಯಿತಿ ವ್ಯಾಪ್ತಿಯ ದೃಶ್ಯ